ದಿನಾಂಕ:16.02.2019 ರಂದು ಶ್ರೀ.ಅಂಜನಪ್ಪ.ಎಂ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಧಸ್ಯರು, ವಾರ್ಡ್ ನಂ-192 ಬೇಗೂರು ರವರ ಅಧ್ಯಕ್ಷತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಾವೇರಿ ಕುಡಿಯುವ ನೀರು ಪೈಪ್ ಅಳವಡಿಕೆ ಮತ್ತು ಸಂಪರ್ಕ, ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ, ಸಾರ್ವಜನಿಕ ಶೌಚಾಲಯ ವ್ಯವಸ್ಥೆ, ಬೀದಿದೀಪ, ಘನತ್ಯಾಜ್ಯ, ಮತ್ತು ವಾರ್ಡ್ ಕಾಮಗಾರಿಗಳಿಗೆ ಸಂಬಂದಿಸಿದಂತೆ ವಾರ್ಡ್ ಮಟ್ಟದ ಕಮಿಟಿ ಸಭೆಯ ನಡಾವಳಿಗಳು.

ಉಪಸ್ಥಿತರಿದ್ದವರು.

| ಕ್ರಮ ಸಂಖ್ಯೆ | ವಾರ್ಡ್ ಸಮಿತಿ ಸಧಸ್ಯರುಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಎಂ.ಅಂಜನಪ್ಪ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಧಸ್ಯರು ಹಾಗೂ ವಾರ್ಡ್ ಮಟ್ಟದ ಕಮಿಟಿಯ ಅಧ್ಯಕ್ಷರು |
| 2 | ಶ್ರೀ.ಮುನಿರಾಜಪ್ಪ | ಸದಸ್ಯರು |
| 3 | ಶ್ರೀ.ನಾರಾಯಣ ಸ್ವಾಮಿ. | ಸದಸ್ಯರು |
| 4 | ಶ್ರೀಮತಿ.ರಾಜಮ್ಮ | ಸದಸ್ಯರು |
| 5 | ಶ್ರೀಮತಿ.ಪ್ರೇಮಕುಮಾರಿ | ಸದಸ್ಯರು |
| 6 | ಶ್ರೀಮತಿ. ಸಹಜ್ ಬೇಗಂ | ಸದಸ್ಯರು |
| 7 | ಶ್ರೀ.ಎನ್.ಮಂಜುನಾಥ್ | ಸದಸ್ಯರು |
| 8 | ಅಧ್ಯಕ್ಷರು. ವಿಶ್ವಪ್ರಿಯನಗರ ರೆಸಿಡೆಂಟ್ಸ್ ವೆಲ್ ಫೆರ್ ಅಸೋಸಿಯೆಷನ್ | ಸದಸ್ಯರು |
| 9 | ಶ್ರೀ.ಆಂಜನೇಯಪ್ಪ | ಸದಸ್ಯರು |
| 10 | ಶ್ರೀ.ಚಿನ್ನಣ್ಣ.ಎ | ಸದಸ್ಯರು |
| 11 | ಶ್ರೀ.ಗೋಪಾಲರೆಡ್ಡಿ | ಸದಸ್ಯರು |
| 12 | ಸಹಾಯಕ ಅಭಿಯಂತರರು ವಾರ್ಡ್-192 | ಕಾರ್ಯದರ್ಶಿ ಮತ್ತು ಸಂಚಾಲಕರು |
| 13 | ಶ್ರೀ.ಶ್ರೀಧರ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 14 | ಶ್ರೀ.ರಮೇಶ್.ಎಲ್. | ಕಿರಿಯ ಆರೋಗ್ಯ ಪರಿವೀಕ್ಷಕರು |

ಮೇಲ್ಕಂಡ ಸಭೆಗೆ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳನ್ನು ವಾರ್ಡ್‌ನ ಸಹಾಯಕ ಅಭಿಯಂತರರು ಸ್ವಾಗತಿಸಿ, ಕಾಶ್ಮೀರದ ಪುಲ್ವಾಮದಲ್ಲಿ ಭಯೋತ್ಪಾಧಕರ ಧಾಳಿಗೆ ಹುತಾತ್ಮರಾದ ಸೈನಿಕರಿಗೆ ಶ್ರದ್ಧಾಂಜಲಿ ಸಲ್ಲಿಸಿ ಸಭೆಯನ್ನು ಪ್ರಾರಂಭಿಸಿದರು. ವಾರ್ಡ್ ಕಮಿಟಿ ಸಭೆಯಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಯಿತು.

**ವಿಷಯ: (1) ವಾರ್ಡ್‌ಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಾವೇರಿ ಕುಡಿಯುವ ನೀರು ಪೈಪ್ ಅಳವಡಿಕೆ ಮತ್ತು ಸಂಪರ್ಕ ವ್ಯವಸ್ಥೆ ಕಲ್ಪಿಸುವ ಬಗ್ಗೆ.**

ಸದರಿ ವಿಷಯವಾಗಿ ಚಿಕ್ಕ ಬೇಗೂರು ರಸ್ತೆಯ ಕೆಲವು ಭಾಗಗಳಲ್ಲಿ ಕುಡಿಯುವ ಕಾವೇರಿ ನೀರಿನ ಸಂಪರ್ಕ ವ್ಯವಸ್ಥೆ ಪ್ರಗತಿಯಲ್ಲಿದ್ದು ಇದೇ ತಿಂಗಳ ಅಂತ್ಯದಲ್ಲಿ ಕೊಳವೆ ಪೈಪ್‌ಗಳನ್ನು ಅಳವಡಿಸಿರುವ ಸುಭಾಷ್‌ನಗರ, ಬೇಗೂರು, ಎಳ್ಳೇನಹಳ್ಳಿ ಮತ್ತು ಚಿಕ್ಕ ಬೇಗೂರು ಗ್ರಾಮಗಳಿಗೆ ಸಾರ್ವಜನಿಕರಿಗೆ ಕಾವೇರಿ ನೀರು ಒದಗಿಸಲಾಗುವುದು ಎಂದು ಚರ್ಚಿಸಲಾಯಿತು ಇದಕ್ಕೆ ಸಮಿತಿಯ ಎಲ್ಲಾ ಸದಸ್ಯರು ಒಪ್ಪಿಗೆ ನೀಡಿರುತ್ತಾರೆ.

**ವಿಷಯ: (2) ವಾರ್ಡ್‌ನ ನೋಬೋ ನಗರ ರೆಸಿಡೆನ್ಸಿ ರವರ ಮನವಿಯಂತೆ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯದ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು.**

2) ವಾರ್ಡ್ ಸಂಖ್ಯೆ-192 ಬೇಗೂರು 2007 ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಗೊಂಡಿದ್ದು 110 ಹಳ್ಳಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ವಾರ್ಡ್ ವಿಸ್ತೀರ್ಣ 18.50 ಚ. ಕಿ.ಮೀ.ಗಳಿದ್ದು ರಸ್ತೆಯ ಉದ್ದ 371.5 ಕಿ.ಮೀ. 52000.00 ಮನೆಗಳು ಮತ್ತು 50 ಫ್ಲ್ಯಾಟ್‌ಗಳನ್ನೊಳಗೊಂಡ ಅಪಾರ್ಟ್‌ಮೆಂಟ್‌ಗಳು ವಾರ್ಡ್ ನ ವ್ಯಾಪ್ತಿಯಲ್ಲಿ ಬರು ಕಾರಣ ಒಂದು ಆಟೋ ಟಿಪ್ಪರ್‌ನಿಂದ 750 ಮನೆಗಳ ಕಸ ಸಂಗ್ರಹಣೆ ಮಾಡಬಹುದಾಗಿರುತ್ತದೆ. 52000.00 ಮನೆಗಳ ಕಸ ಸಂಗ್ರಹಣೆ ಮಾಡಲು 70 ಆಟೋ ಟಿಪ್ಪರ್‌ಗಳ ಅವಶ್ಯಕತೆಯಿರುತ್ತದೆ.

<u>ವಿಷಯ: 3)</u> ಮಳೆಯ ಅಭಾವದಿಂದಾಗಿ ಕೊಳವೆ ಬಾವಿಗಳ ನೀರಿನ ಮಟ್ಟ ಕುಸಿದಿದ್ದು ಸಮರ್ಪಕವಾಗಿ ನೀರು ಸರಬರಾಜು ಮಾಡಲಾಗುತ್ತಿಲ್ಲ ಆದುದರಿಂದ ಕಾವೇರಿ ನೀರನ್ನು ಹೆಚ್ಚುವರಿಯಾಗಿ ಸರಬರಾಜು ಮಾಡಲು ಚರ್ಚಿಸಿ ತೀರ್ಮಾನಿಸಲಾಯಿತು.

<u>ವಿಷಯ: 4)</u> ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಯಲು ಅನುಧಾನ ಅವಶ್ಯಕತೆಯಿರುತ್ತದೆ. ಇದನ್ನು ಸಧ್ಯರಿ ಸಾಲಿನಲ್ಲಿ ಬಿಡುಗಡೆ ಮಾಡಿಸುವ ಬಗ್ಗೆ ಚರ್ಚಿಸಲಾಯಿತು.

ವಾರ್ಡ್‌ನಲ್ಲಿ ಕಸ ನಿರ್ವಹಣೆ ಮಾಡಲು ಅಗತ್ಯ ಪ್ರಮಾಣದ ಮಾನವಶಕ್ತಿ ಮತ್ತು ಯಂತ್ರೋಪಕರಣಗಳು ಇಲ್ಲದ ಕಾರಣ ಸಮರ್ಪಕವಾದ ಕಸ ನಿರ್ವಹಣೆ ಆಗುತ್ತಿಲ್ಲ. ಆದುದರಿಂದ ಕೊರತೆ ಇರುವ ಮಾನವಶಕ್ತಿಗಳು ಆಟೋ ಟಿಪ್ಪರ್ ಮತ್ತು ಕಂಪ್ಯಾಕ್ಟರ್‌ಗಳನ್ನು ಒದಗಿಸಿಕೊಡಲು ವಾರ್ಡ್‌ನಲ್ಲಿ ಅಗತ್ಯವಾದ ಸೌಲಭ್ಯಗಳನ್ನು ನೀಡಲು ಸಂಬಂದಿಸಿದ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ-192, ಬೇಗೂರು.

ಅಧ್ಯಕ್ಷರು
ವಾರ್ಡ್ ಕಮಿಟಿ
ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಧಸ್ಯರು.
ವಾರ್ಡ್ ನಂ-192, ಬೇಗೂರು.

<u>ಪ್ರತಿಯನ್ನು:-</u>

1) ಜಂಟಿ ಆಯುಕ್ತರು(ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ.
2) ಉಪ ಆಯುಕ್ತರು(ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ.
3) ಕಂದಾಯ ಅಧಿಕಾರಿ(ಅಂಜನಾಪುರ) ವಲಯ ರವರ ಅವಗಾಹನೆಗೆ ಮಂಡಿಸಿದೆ.
4) ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.
5) ಕಛೇರಿ ಕಡತಕ್ಕೆ.